# ಕುವೆಂಪುರವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ: ಒಂದು ಚಿಂತನೆ

**ರಂಗಲಕ್ಷ್ಮಿ ಪಿ. ಎ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಲಾಲ್ ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆರ್. ಟಿ. ನಗರ, ಬೆಂಗಳೂರು.

**Received:** 11-07-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13871017**

**ABSTRACT:**

ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಕುವೆಂಪು ಎಂಬ ಹೆಸರಿನಲ್ಲಿ ಪ್ರಸಿದ್ದವಾಗಿರುವ ಕವಿ. ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೆಲಸ ನಿರ್ವಹಿಸಿದ್ದಾರೆ. ಈ ಲೇಖನದಲ್ಲಿ ಕವಿ ಕುವೆಂಪು ಅವರ ಸಾಹಿತ್ಯದಲ್ಲಿ ಕಂಡು ಬಂದಿರುವ ಸಾಮಾಜಿಕ ಕಳಕಳಿ ಹೇಗೆ ಮೂಡಿಬಂದಿದೆ ಎಂದು ಕೆಲವು ಪದ್ಯಗಳ ಉದಾಹರಣೆಯನ್ನು ತೆಗೆದುಕೊಂಡು ವಿವರಿಸಲಾಗಿದೆ. ಸುಂದರವಾದ ಮಲೆನಾಡಿನ ಕುಪ್ಪಳ್ಳಿಯಲ್ಲಿ ಕವಿ ಕುವೆಂಪು ಅವರ ಜನನ 1904 ನೇ ಇಸವಿ ಡಿಸೆಂಬರ್ 29 ರಂದು ಆಯಿತು. ಆ ಕಾಲದ ಮಲೆನಾಡು ಈಗಿನಂತೆ ತೆಳ್ಳಗಿರಲಿಲ್ಲ. ಸಹ್ಯಾದ್ರಿ ಶ್ರೇಣಿ ಎಂದು ಕರೆಯುವ ಪ್ರದೇಶದಲ್ಲಿ ದಟ್ಟವಾದ ಅರಣ್ಯವಿತ್ತು. ಇಂಥಹ ಮಲೆನಾಡಿನ ಗರ್ಭದಲ್ಲಿ ಜನ್ಮತಾಳಿದ ಕವಿ ಕುವೆಂಪುವಿಗೆ ಪೂರ್ವ ಜನ್ಮದ ಪುಣ್ಯವೇ ಮೈವೆತ್ತಂತೆ ಅನಿಸಿತು. ಚಿಕ್ಕವಯಸ್ಸಿನಿಂದಲೂ ಪ್ರಕೃತಿಯ ಜೊತೆಯಲ್ಲಿಯೇ ಬೆಳೆದ ಕವಿಗೆ ನಿತ್ಯವೂ ಹೊಸದಾಗಿಯೇ ಗೋಚರಿಸುವ ದೃಷ್ಯಗಳು. ಕುವೆಂಪು ಅವರ ವೈಚಾರಿಕತೆಯು ಅವರ ಸಾಹಿತ್ಯದಲ್ಲಿ ಮೂಡಿಬಂದಿದೆ.

**KEYWORDS:**

ಕುವೆಂಪು, ಸಾಮಾಜಿಕ ಪ್ರಜ್ಞೆ, ವೈಚಾರಿಕತೆ, ಪ್ರಕೃತಿ, ಸಮಾನತೆಯ ಧೋರಣೆ.

ಚಿಕ್ಕವಯಸ್ಸಿನಿಂದಲೂ ಪ್ರಕೃತಿಯ ಜೊತೆಯಲ್ಲಿಯೇ ಬೆಳೆದ ಕವಿಗೆ ನಿತ್ಯವೂ ಹೊಸದಾಗಿಯೇ ಗೋಚರಿಸುವ ದೃಷ್ಯಗಳು ಅಸಂಖ್ಯವಾಗಿರುತ್ತವೆ. 'ನಾನೇನಾದರೂ ಮಲೆನಾಡಿನಲ್ಲಿ ಹುಟ್ಟಿಲ್ಲದಿದ್ದರೆ ನಾನು ಕವಿಯಾಗುತ್ತಿರಲಿಲ್ಲ' ಎಂಬ ಕುವೆಂಪು ಅವರ ಮಾತು ಸತ್ಯವಾದದ್ದು. ಕುವೆಂಪು ಕವಿಯಾಗದಿದ್ದರೆ ಕನ್ನಡ ಸಾಹಿತ್ಯವು ಅಮೂಲ್ಯವಾದ ರತ್ನವೊಂದನ್ನು ಕಳೆದುಕೊಳ್ಳುತ್ತಿತ್ತು ಎಂಬ ಮಾತೂ ಅಷ್ಟೇ ಸತ್ಯ.

ಕವಿ ಕುವೆಂಪು ಪ್ರಕೃತಿಯ ಬಗ್ಗೆ ಹೆಚ್ಚು ಒಲವು ತೋರಿದ್ದರೂ, ಸಮಾಜದ ಬಗ್ಗೆಯೂ ಅವರ ಸಾಹಿತ್ಯದಲ್ಲಿ ಕಾಳಜಿಯು ಕಂಡುಬರುವುದು ಸಹಜವಾದ ಮಾನವ

ಪ್ರೀತಿಯು ಮಾನವನ ಬದುಕಿನ ಗುರಿ ಗಮ್ಮತ್ತು ಅಪಾರವಾದುದು ಉತ್ತಮವಾದ ಜ್ಞಾನ, ತಿಳುವಳಿಕೆ ಅಮೂಲ್ಯವಾದ ಜೀವನವನ್ನು ರೂಪಿಸುವುದು ಹೊಸ ಹೊಸ ಆಲೋಚನೆಗಳು ಸಮಾಜದ ಸುದಾರಣೆಯ ಕಡೆಗೆ ಇರಬೇಕೆಂಬ ಚಿಂತನೆಗಳು ಕುವೆಂಪು ಅವರ ಕೆಲವು ಕವಿತೆಗಳಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ ಹೇಳುವುದಾದರೆ:

**ಯಾವಕಾಲದ ಶಾಸ್ತ್ರವೇನು ಹೇಳಿದರೇನು?**
**ಎದೆಯದನಿಗೂ ಮಿಗಿಲು ಶಾಸ್ತ್ರವಿಹುದೇನು?**
**ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?**
**ನಿನ್ನೆದೆಯದನಿಯೆ ಋಷಿ ಮನು ನಿನಗೆ ನೀನು!**

ಕುವೆಂಪು ಮನುಧರ್ಮಶಾಸ್ತ್ರದ ವಿಚಾರವನ್ನು ಈ ಪದ್ಯದಲ್ಲಿ ಹೇಳುತ್ತ ಶಾಸ್ತ್ರವನ್ನು ನಂಬಿ ಮನುಷ್ಯ ಮಾನವ ಧರ್ಮವನ್ನು ಬಿಟ್ಟು ಯಾರೊ ಬರೆದಿಟ್ಟ ಕೃತಿಗೆ ಅರ್ಹತೆಯಿದೆ ಎಂದು ನಂಬಿ ವಿದ್ಯೆಯಿಂದ ಶೂದ್ರವರ್ಗ ವಂಚಿತರಾಗಿದ್ದಾರೆ. ಆತ್ಮವಿದ್ಯೆಯಿಂದ ಪ್ರಾಪ್ತವಾಗುವ ಬ್ರಹ್ಮಜ್ಞಾನ ಮನುವಿನ ಪ್ರಕಾರ ದ್ವಿಜೋತ್ತಮರ ಸ್ವತ್ತು. ಒಂದುವೇಳೆ ಶೂದ್ರರು ವಿದ್ಯೆ ಕಲಿತರೆ ಅದು ಘೋರ ಶಿಕ್ಷೆಗೆ ಕಾರಣವಾಗುತ್ತಿತ್ತು. ವೇದ ವಿದ್ಯೆ ಕೇಳಿದ ಶೂದ್ರರ ಕಿವಿಯಲ್ಲಿ ಕಾದ ಸೀಸದ ರಸ ಹೊಯ್ಯಬೇಕು ಬ್ರಹ್ಮ ಮಂತ್ರಗಳನ್ನು ಪಠಿಸಿದವರ ನಾಲಿಗೆ ಕತ್ತರಿಸಬೇಕು. ಹೀಗೆ ಸಮಾಜದಲ್ಲಿ ವಿದ್ಯೆ ಎಂಬುದು ಕೇವಲ ಕೆಲವೇ ಜಾತಿಗೆ ಸೀಮಿತವಾಗಿದ್ದು ಇದರಿಂದ ಸಾಮಾಜಿಕ ಅಸಮತೋಲನ ಹೆಚ್ಚಾಗಿ ಮಾನವರ ನಡುವೆ ತಾರತಮ್ಯ ಭಾವನೆ ಹೆಚ್ಚಾಗಿ ಶೂದ್ರರನ್ನು ಕೀಳಾಗಿ ನೋಡುವ ಪರಿಸ್ಥಿತಿ ತಲೆದೋರಿತು.

ಇದಕ್ಕೆ ಉದಾಹರಣೆಯಾಗಿ "ಬೆರಳ್ಗೆ ಕೊರಳ್" ನಾಟಕದಲ್ಲಿ ದ್ರೋಣಾಚಾರ್ಯ ಕಲಿಸದ ವಿದ್ಯೆಗೆ ಏಕಲವ್ಯನಿಂದ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆಯುವ ರೀತಿಯನ್ನು ಗಮನಿಸಿದಾಗ ಕ್ಷತ್ರಿಯರಿಗೆ ಮಾತ್ರ ಬಿಲ್ವಿದ್ಯೆ ಕಲಿಯುವ ಅರ್ಹತೆಯಿದ್ದು ಶೂದ್ರರು ಕಲಿತಾಗ ಅವರು ಯಾವ ರೀತಿಯ ಶಿಕ್ಷೆಗೆ ಗುರಿಯಾಗುತ್ತಿದ್ದರು ಎಂಬುದು ಈ ನಾಟಕದಲ್ಲಿ ತಿಳಿದು ಬರುತ್ತದೆ. ಕುವೆಂಪು ಈ ನಾಟಕದಲ್ಲಿ ಶೂದ್ರರ ವಿದ್ಯೆಯ ಬಗ್ಗೆ ಮನು ಶಾಸ್ತ್ರವನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ. ಸಮಾಜದಲ್ಲಿ, ವರ್ಣ ಪದ್ದತಿ, ಜಾತಿ ಪದ್ದತಿ ಎಷ್ಟರ ಮಟ್ಟಿಗೆ ರೂಢಿಗತವಾಗಿತ್ತು ಎಂಬುದು ಕಂಡುಬರುತ್ತದೆ. ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ಗ್ರಹಿಸಿದಾಗ ಸಾಮಾಜಿಕ ಅಸಮತೋಲನವನ್ನು ಕವಿ ತನ್ನ ಕೃತಿಯಲ್ಲಿ ಬಿಂಬಿಸಿದ್ದಾರೆ.

**ಧನಿಕರ ಮನೆಗಳು ಒಂದೆಡೆ ನಿಂತಿವೆ**
**ಬಡವರ ಗುಡಿಸಲು ಒಂದೆಡೆ ನಿಂತಿವೆ**
**ಜ್ಯೋತಿಯ ಮಣಿ ದೀಪಗಳಲ್ಲಿ:**

**ಕತ್ತಲು ಕತ್ತಲು ಇಲ್ಲಿ!**

ಮೇಲಿನ ಈ ಕವಿತೆಯ ಸಾಲುಗಳಲ್ಲಿ ಸಮಾಜದ ಅಸಮಾನತೆ ದಾರಿದ್ರ್ಯ ದುಃಖಗಳು ಅನಾವರಣಗೊಂಡಿರುವುದನ್ನು ಕಾಣಬಹುದು. ಶ್ರೀಮಂತರು ಮತ್ತು ಬಡವರ ನಡುವಿರುವ ವರ್ಣ, ವರ್ಗ, ಜಾತಿ ಮುಂತಾದ ತಾರತಮ್ಯ ಭಾವನೆಯಿರುವುದು ಕಾವ್ಯದಲ್ಲಿ ಪ್ರತಿ ಬಿಂಬಿಸುತ್ತಿದೆ. ಕವಿ ಸಾಮಾಜಿಕ ಅಸಮತೋಲನಯಿರುವುದನ್ನು ಜೀವನ ಅನುಭವದ ಮೂಲಕ ಕಾವ್ಯ ರಚನೆ ಮಾಡಿದ್ದಾರೆ.

**ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು**
**ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!**
**ಯುಗ ಯುಗದ ದಾರಿದ್ರ್ಯ ಭಾರದಿಂ ಬೆನ್ಬಾಗಿ**
**ಗೋಳಿಡುವ ಬಡಜನರೆ, ಏಳಿರೇ ಏಳಿ!**

ಈ ಕವನದ ಸಾಲುಗಳಲ್ಲಿ ಸಮಾಜದ ಎಲ್ಲಾ ವರ್ಗದವರಿಗೂ ಸಮಾನವಾದ ಅನ್ನ, ಬಟ್ಟೆ, ಅಕ್ಷರ ಆರೋಗ್ಯ ಆಸರೆ ಎಲ್ಲವೂ ಸರಿ ಸಮಾನವಾಗಿ ದೊರಕಬೇಕು ಹೊಸಯುಗಕ್ಕೆ ನಾಂದಿಯಾಡಿ ಅನಾದಿ ಕಾಲದಿ ಕಾಲದಿಂದಿರುವ ಬಡತನವನ್ನು ಹೋಗಲಾಡಿಸುವ ಎಚ್ಚರಿಕೆಯ ಗಂಟೆಯನ್ನು ಬಾರಿಸುವ ಮೂಲಕ ಎಲ್ಲರೂ ಎಲ್ಲದ್ದಕ್ಕೂ ಸಿದ್ದರಾಗಿ ಏಳಿ ಎದ್ದೇಳಿ ಎಂಬ ಕೂಗನ್ನು ಕವಿ ಮೊಳಗಿಸಿದ್ದಾರೆ.

**ಸತ್ತಂತ್ತಿಹರನು ಬಡಿದ್ದೆಚ್ಚರಿಸು**
**ಕಚ್ಚಾಡುವವರನು ಕೂಡಿಸಿ ಒಲಿಸು**
**ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು**
**ಒಟ್ಟಿಗೆ ಬಾಳುವ ತೆರದಲಿ ಹರಸು!**

ಈ ಕವಿತೆಯಲ್ಲಿ ಕುವೆಂಪು ಅವರಿಗೆ ಕರ್ನಾಟಕದ ಬಗ್ಗೆ ಇದ್ದ ಕಾಳಜಿಯನ್ನು ಸ್ಪುಟವಾಗಿ ಘೋಷಿಸಿರುವುದರಿಂದ ಕವಿತೆಯ ರಚನೆಯ ಸ್ಪೂರ್ತಿ ಯಾವುದೆಂದು ಕವಿತೆಯಲ್ಲಿ ಬರುವ ಕಚ್ಚಾಡುವವರನು ಕೂಡಿಸಿ ಒಲಿಸು ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು ಒಟ್ಟಿಗೆ ಬಾಳುವ ತೆರದಲಿ ಹರಸು! ಎಂಬ ಸಾಲುಗಳು ಏಕೀಕರಣವಾದ ಹೊಸತರಲ್ಲೇ ರಾಜ್ಯಾಡಳಿತ ವಹಿಸಿದ್ದ ರಾಜಕೀಯ ಪಕ್ಷದಲ್ಲಿ ಭಿನ್ನಮತದ ಭೂತ ತಲೆ ಎತ್ತಿದಾಗ ಸುಂದರ ಕರ್ನಾಟಕದ ಕನಸು ಕಂಡಿದ್ದ ಕವಿಗೆ ಬೇಸರವಾಗಿ ಸಮಾಜದ ಅವ್ಯವಸ್ಥೆಯನ್ನು ನೋಡಿ ಸಹಿಸಲಾಗದೆ ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ಈ ಕವಿತೆ ರಚನೆಯಾಗಿರುವುದು.

ಕುವೆಂಪುರವರ ಶೂದ್ರ ತಪಸ್ವಿ ಮತ್ತು ಜಲಗಾರ ನಾಟಕಗಳಲ್ಲಿ ಸಾಮಾಜಿಕ ಅಸಮತೋಲನ, ಅಸಮಾನತೆ, ವರ್ಗ, ವರ್ಣ, ಜಾತಿ ವ್ಯವಸ್ಥೆಗಳು ಪುರೋಹಿತಶಾಹಿ ವರ್ಗದ ಹಿನ್ನೆಲೆಯಲ್ಲಿ ಪಾತ್ರಗಳನ್ನುತರುವುದರ ಮೂಲಕ

ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಶೂದ್ರ ತಪಸ್ವಿ ನಾಟಕದಲ್ಲಿ ವೃಕ್ಷ ಭೈರವ ಮತ್ತು ಮೃತ್ಯು ಎಂಬ ಎರಡು ಅತಿಮಾನುಷ ಪಾತ್ರಗಳ ಸಂಭಾಷಣೆಯಿಂದ ಪ್ರಾರಂಭವಾಗುವ ಶಂಭೂಕ ಋಷಿಯ ಆಶ್ರಮವನ್ನು ಕಾಯುವ ಸಂದರ್ಭದಲ್ಲಿ ಮೃತ್ಯು ಅಲ್ಲಿಗೆ ಬಂದಾಗ ಅದನ್ನು ತಡೆದು ನಿಲ್ಲಿಸುವ ಯತ್ನದಲ್ಲಿ ವೃಕ್ಷ ಭೈರವನ ಸಂಭಾಷಣೆಯಲ್ಲಿ ನಾಟಕ ಪ್ರಾರಂಭವಾಗಿ ಪಾಮರನ ಮಗನ ಸಾವು ಸಂಭವಿಸಿದ ಸಂದರ್ಭದಲ್ಲಿ ಬ್ರಾಹ್ಮಣ ತನ್ನ ಮಗನ ಸಾವಿಗೆ ಶೂದ್ರನಾದ ಶಂಭೂಕ ಕಾರಣ ಎಂದು ದೂಷಿಸುತ್ತಾ:

**ಶ್ರೀರಾಮನಾಳ್ವಿಂದೆ ರಾಜಪ್ರಜೆಗೆ ಕುಂದೆ?**
**ದೊರೆಯ ದೋಷಮೆ ಕಾರಣಂ ಪ್ರಜಾಸಂಕಟಮೆ**

ರಾಮನಲ್ಲಿಗೆ ಬಂದು ಪಾಪಕೃತ್ಯವನ್ನು ಮಾಡಿರುವ ಶೂದ್ರನಾದ ಶಂಭೂಕನ ಬಗ್ಗೆ ಗರ್ವಿಷ್ಠನಾದ ಬ್ರಾಹ್ಮಣ ದೂರನ್ನು ಸಲ್ಲಿಸುವಂತಹ ಪರಿಯಲ್ಲಿ ಈ ಪಾಪಕೃತ್ಯಕ್ಕೆ ಕಾರಣನಾದ ಋಷಿಗೆ ತಕ್ಕ ಶಿಕ್ಷೆಯಾಗಬೇಕೆಂದು ರಾಮನಲ್ಲಿ ಮೊರೆಯಿಡುವ ಮೂಲಕ ವರ್ಣ ವ್ಯವಸ್ಥೆ ಹೇಗೆ ಕಟ್ಟುನಿಟ್ಟಾಗಿತ್ತು ಎಂಬುದು ನಾಟಕದಲ್ಲಿ ಕಂಡುಬರುತ್ತದೆ. ಶೂದ್ರರಾದವರು ಯಾವುದೇ ವಿದ್ಯೆಗೆ ಅರ್ಹರಲ್ಲ ಎಂಬುದು ಬ್ರಾಹ್ಮಣನ ವಾದವಾಗಿದ್ದು ಜ್ಞಾನಿಯಾದ ಶಂಭೂಕನ ಬಗ್ಗೆ ಅರಿವಿದ್ದ ರಾಮನು ಪಾಮರನಿಗೆ ತಿಳಿ ಹೇಳುವುದರ ಮೂಲಕ ತಪಸ್ಸಿಗೆ ಮತ್ತು ಮಗುವಿನ ಸಾವಿಗೆ ಜಾತಿ ಕಾರಣವಲ್ಲ ಎಂಬುದನ್ನು ತಿಳಿಸುತ್ತಾನೆ. ರಾಜ್ಯದಲ್ಲಿ ಪ್ರಜೆಗಳಿಗೆ ಬಂದೊದಗುವ ಸಂಕಟಕ್ಕೆ ಆಳುವವನೆ ನೇರ ಹೊಣೆಗಾರಿಕೆಯನ್ನು ಹೊರಬೇಕೆಂಬುದು ಬ್ರಾಹ್ಮಣನ ವಾದವಾಗಿರುತ್ತದೆ. ಈ ನಾಟಕದಲ್ಲಿ ಕುವೆಂಪುರವರು ಶಂಭೂಕ ಮುನಿಯನ್ನು ಕೊಲ್ಲದೆ ಜಾತಿ, ಮತಾಂಧ ಬ್ರಾಹ್ಮಣನ ಮನುಧರ್ಮ ಶಾಸ್ತ್ರವನ್ನು ರಕ್ಷಿಸುವ ಅವಿಚಾರಿಯಾಗದೆ ರಾಮನ ಮರ್ಯಾದೆಯನ್ನು ಉಳಿಸಿದ ವೈಚಾರಿಕತೆ ಇಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದೆ.

ಕುವೆಂಪುರವರ ವೈಚಾರಿಕತೆಯ ವೈಭವವನ್ನು ಜಲಗಾರ ನಾಟಕದಲ್ಲಿ ದೈವಭಕ್ತಿ ಮತ್ತು ಮೌಢ್ಯತೆ ಜೊತೆಗೆ ದೇವರು ಶೋಷಣೆಯ ವಸ್ತುವಾಗಬಾರದು ಎಂಬುದನ್ನು ಪ್ರತಿಪಾದಿಸುವ ಒಂದು ಸಣ್ಣ ಸರಳವಾದ ನಾಟಕ ಜಲಗಾರ.

**ಮುಂಜಾನೆಳಗೆಲ್ಲಿ ಹೋಗುತಿಹೆ, ರೈತ?**
**ರೈತ: ...ಇಂದು ನಮ್ಮೂರ**
**ಶಿವಗುಡಿಯ ಜಾತ್ರೆ! ಬರುವುದಿಲ್ಲವೆ ನೀನು?**
**ಜಲಗಾರ: ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು**
**ದೇಗುಲದ ಬಳಿಗೆನ್ನ ಸೇರಿಸರು.**
**ರೈತ: ದೂರದಲ್ಲಿಯೆ ನಿಂತು ಕೈಮುಗಿದು ಬಾ.**

ಜಲಗಾರ ಮತ್ತು ರೈತನ ನಡುವೆ ನಡೆಯುವ ಸಂಭಾಷಣೆಯಿಂದ

ಪ್ರಾರಂಭವಾಗುವ ನಾಟಕವು ರೈತನಲ್ಲಿರುವ ಮೌಢ್ಯತೆಯನ್ನು ಕುರಿತು ಹೇಳುತ್ತದೆ. ತನ್ನ ಕರ್ತವ್ಯದಲ್ಲಿ ನಿರತನಾದ ಜಲಗಾರ ತಾನು ಮಾಡುವ ಕೆಲಸದಲ್ಲಿ ದೇವರನ್ನು ಕಾಣುವಂತಹ ಪ್ರಯತ್ನವನ್ನು ಮಾಡುತ್ತಾನೆ. ರೈತ ಶಿವರಾತ್ರಿಯ ದಿನ ಶಿವನ ದೇವಾಲಯಕ್ಕೆ ಹೋಗುವಾಗ ಜಲಗಾರನನ್ನು ದೇವಸ್ಥಾನಕ್ಕೆ ಆಹ್ವಾನಿಸಿದಾಗ ಜಲಗಾರ ರೈತನಿಗೆ ದೇವಸ್ಥಾನದ ದೇವರು ಜೋಯಿಸರ ದೇವರಂತೆ ನೆನ್ನೆ ದಿನ ನನ್ನ ಮಗ ದೇಗುಲದ ಬಳಿ ಹೋದಾಗ ಆತನನ್ನು ಹೊರದೂಡಿದ್ದಾರೆ. ಹೀಗಿರುವಾಗ ಶಿವ ಇರುವ ದೇವಾಲಯಕ್ಕೆ ನನ್ನ ಕೆಲಸ ಬಿಟ್ಟು ಬರುವುದಿಲ್ಲವೆಂದು ಹೇಳುತ್ತಾ ನೀನು ಸಹ ನಿನ್ನ ಕೆಲಸದಲ್ಲಿ ದೇವರನ್ನು ಕಾಣು ಎಂದು ಬುದ್ಧಿ ಹೇಳುತ್ತಾನೆ. ಆದರೆ ದೇವರ ಆರಾಧನೆಯೇ ಮುಖ್ಯ ಎಂದು ಪರಿಗಣಿಸಿದ ರೈತ ಜಲಗಾರನನ್ನು ನಿಂದಿಸಿ ದೇಗುಲಕ್ಕೆ ತೆರಳುತ್ತಾನೆ. ತದನಂತರ ನಾಟಕದಲ್ಲಿ ಬರುವ ಭಿಕ್ಷುಕ ಪಾಮರ, ಯುವಕರು, ರೈತ, ಹುಡುಗಿ ಇವರ ಪಾತ್ರಗಳಲ್ಲಿ ಯುವಕರು ಭಿಕ್ಷುಕನಿಗೆ ದೈಹಿಕವಾಗಿ ಹಿಂಸಿಸುವಾಗ ಅದನ್ನು ಜಲಗಾರ ತಡೆಯುತ್ತಾನೆ.

**ಎದ್ದೇಳು ಭಿಕ್ಷುಕನೆ, ನನ್ನನ್ನದೊಳೆ, ಮುಷ್ಠಿ**
**ನಿನಗಿಕ್ಕಿ ಶಿವಪೂಜೆ ಮಾಡುವೆನು. ನೀನೆನ್ನ**
**ಸೋದರ, ನೀನೆನ್ನ, ನೀನೆನ್ನ ದೇಗುಲ! ನೀನಿನಗೆ**
**ಪರಶಿವ ! ಏಳು, ಮೇಲೇಳು, ಸೋದರನೆ!**

ಜಲಗಾರ ತಿರುಕನ ಕೈಹಿಡಿದು ಮೆಲ್ಲನೆ ನಡೆಸಿಕೊಂಡು ಹೋಗುತ್ತಾನೆ ತಾನು ತಿನ್ನುವ ಅನ್ನದಲ್ಲಿ ಒಂದು ಹಿಡಿ ಅನ್ನವನ್ನು ಆತನಿಗೆ ನೀಡಿ "ಬಡವರಿಗೆ ಬಡವರೇ ಸಾಕಾರ" ಎಂದು ಹೇಳುತ್ತಾ ಆತನನ್ನು ಸಲಹುತ್ತಾನೆ. ಕೊನೆಗೆ ದೇವಾಲಯದ ಶಿವ ಜಲಗಾರನ ಕರ್ತವ್ಯಕ್ಕೆ ಮೆಚ್ಚಿ ಪ್ರತ್ಯಕ್ಷವಾಗುವುದರ ಮೂಲಕ ಅಂತ್ಯಗೊಳ್ಳುತ್ತದೆ. ಈ ನಾಟಕದಲ್ಲಿ ಪುರೋಹಿತರ ಕಪಟ ಗುಟ್ಟು, ಆ ದಿನ ದೇವಸ್ಥಾನದಲ್ಲಿ ಸಂಪಾದಿಸಿದ ಹಣದ ಬಗ್ಗೆ ತಿಳಿಸುತ್ತದೆ. ಶಿವನ ಗುಡಿ ತೀರ್ಥ ಪ್ರಸಾದ ಇವೆಲ್ಲ ಸುಲಿಗೆಯ ಸಾದನೋಪಾಯಗಳು! ಗುಡಿಯೊಳಗೆ ದೇವರಿಲ್ಲ ಎಂಬುದನ್ನು ಮನವರಿಕೆ ಮಾಡಿ ಕೊಡುತ್ತವೆ. ಕುವೆಂಪುರವರು ಈ ನಾಟಕದ ಮೂಲಕ ದೇವರ ಹೆಸರಿನಲ್ಲಿ ನಡೆಯುವ ಪೂಜೆ, ಹವನ, ಯಜ್ಞ ಇವೆಲ್ಲ ಪುರೋಹಿತರು ತಮ್ಮ ಜೀವನೋಪಾಯಕ್ಕಾಗಿ ಬೇರೆ ವರ್ಗದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂಸಿಸುವ ಪರಿಯಾಗಿದೆ.

ಒಟ್ಟಾರೆಯಾಗಿ ಕುವೆಂಪುರವರು ಸಾಮಾಜಿಕ ಕಳಕಳಿಕೆಯನ್ನು ಹೊಂದಿದ್ದು, ತಮ್ಮ ಸಾಹಿತ್ಯದ ಮೂಲಕ ಜಾತಿ, ಧರ್ಮ, ವರ್ಗ, ವರ್ಣ ಇವುಗಳ ನಿರಾಕರಣೆಯನ್ನು ತಮ್ಮ ಬರಹದಲ್ಲಿ ಅನಾವರಣಗೊಳಿಸಿದ್ದು, ಯಾರೂ ಮತಾಂಧರಾಗಬಾರದು, ಮೌಢ್ಯತೆಯನ್ನು ತೊರೆದು ವೈಚಾರಿಕ ನೆಲೆಯಲ್ಲಿ ಚಿಂತಿಸಬೇಕೆಂದು ಎಲ್ಲರಿಗೂ

ಸಮಬಾಳು–ಸಮಪಾಲು ಸಿಗಬೇಕೆಂದು ಆಶಿಸುತ್ತಾರೆ.

**ಪರಾಮರ್ಶನ ಗ್ರಂಥಗಳು:**


1. ರಹಮತ್ ತರೀಕೆರೆ. (1993). ಪ್ರತಿ ಸಂಸ್ಕೃತಿ. ಅಭಿನವ ಪ್ರಕಾಶನ. ಬೆಂಗಳೂರು.
2. ನಾಗಭೂಷಣ ಡಿ. ಎಸ್. (ಸಂ). (2005). ಕುವೆಂಪು ಒಂದು ಪುನರನ್ವೇಷಣೆ. ಗೀತಾಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ.
3. ಸಿ.ಪಿ.ಕೆ. (2012). ಕುವೆಂಪು ಸಾಹಿತ್ಯ ಸಂವಾದ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
4. ದೇ.ಜ.ಗೌ. (2003). ಅಭಿಜಾತ ವಿಡಂಬನಾಕಾರ ಕುವೆಂಪು. ಸಹ್ಯಾದ್ರಿ ಪ್ರಕಾಶನ. ಮೈಸೂರು.
5. ಕುವೆಂಪು. (2018). ಜಲಗಾರ. ಉದಯ ರವಿ ಪ್ರಕಾಶನ. ಮೈಸೂರು.
6. ಕುವೆಂಪು. (2020). ಶೂದ್ರತಪಸ್ವಿ. ಉದಯ ರವಿ ಪ್ರಕಾಶನ. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.